

# ಬಾಟಮ್ ಭಾಗ್ಯ!

ಎಂ.ಜಿ. ಶುಭಮಂಗಳ

ಹತ್ತೊಂಬತ್ತನೇ ಶತಮಾನದ ಭಾರತೀಯ ಮಹಿಳೆಯರು ಹೆಚ್ಚಿಗೆ ಚೂರಿದಾರ್ ತೊಡುತ್ತಿದ್ದರು. ಉತ್ತರ ಭಾರತೀಯ ಮೂಲದ ಚೂರಿದಾರ್ 20ನೇ ಶತಮಾನದಲ್ಲಿ ಇಂಗ್ಲಿಷ್‌ನಲ್ಲಿಯೂ ಬಳಕೆಯಾಗತೊಡಗಿತು. ಚೂರಿದಾರ್ ಹಾಗೂ ಅದರ ಪೈಜಾಮಗಳು ಬಿಗಿಯಾದ ಉಡುಪಾಗಿದ್ದು, ದಕ್ಷಿಣ ಏಷ್ಯಾದಲ್ಲಿ ಮಹಿಳೆಯರು ಮತ್ತು ಪುರುಷರಿಬ್ಬರೂ ತೊಡುವ ಉಡುಗೆ. ಹೆಚ್ಚು ಉದ್ದದ ಮಡಿಕೆಗಳು ಪಾದದ ಕೀಲು(ಆ್ಯಂಕಲ್)ಗಳ ಬಳಿ ಬಳೆಗಳಂತೆ ಜೋತುಬೀಳುವುದರಿಂದ ಅದು 'ಚೂರಿ' ಬಳೆ, 'ದಾರ್' ತೊಟ್ಟಂತೆ. ಹಾಗಾಗಿ 'ಚೂರಿದಾರ್'. ಚೂರಿದಾರ್ ಎಂಬುದು ಚೂಡಿದಾರ್ ಎಂದು ಕೂಡ ಬಳಕೆಯಲ್ಲಿದೆ. ಇತಿಹಾಸ ಕೆದಕುತ್ತ ಹೋದರೆ ಇನ್ನೂ ಸಾಕಷ್ಟು ಮಾಹಿತಿಗಳು ಸಿಗಬಹುದು. ಆದರೆ ಈಗ ನೇರ ವಿಷಯಕ್ಕೆ ಬರೋಣ.

ಇತ್ತೀಚೆಗೆ ನಾನು ಖರೀದಿಸಿದ ಚೂಡಿದಾರ್ ಟಾಪ್‌ಗಳಿಗೆ ಬಾಟಮ್ ಕೊಳ್ಳಲು ಅಲೆದಾಟವೋ ಅಲೆದಾಟ. ವಾರಾಂತ್ಯವಾದರೆ ನಾವು ಎಲ್ಲಿಗೇ ಹೋಗಲಿ ಆ ಟಾಪ್‌ಗಳಿಗೂ ಮೆರವಣಿಗೆ. ದೂರದ ನೆಂಟರ ಮನೆಯ ಸಮಾರಂಭಕ್ಕೆಂದು ಹೊರಟಾಗ ಅಲ್ಲಿ ಕಾರ್ಯಕ್ರಮ ಮುಗಿದ ಮೇಲೆ ಅವಕ್ಕೆ 'ಬಾಟಮ್ ಭಾಗ್ಯ' ಕಲ್ಪಿಸೋಣವೆಂದು ಒಂದು ಬ್ಯಾಗಿಗೆ ಹಾಕಿ ಹೊತ್ತುಕೊಂಡು ಹೋದದ್ದಾಯಿತು.

ವೈಭವೋಪೇತವಾಗಿ ನಡೆಯುತ್ತಿದ್ದ ಸಮಾರಂಭದಲ್ಲಿ ನನಗೆ ಎಲ್ಲರ ಸೀರೆ–ಡ್ರೆಸ್‌ಗಳ ಮೇಲೇ ಕಣ್ಣು. ನಮ್ಮ ಮನೆಯವರು 'ಅದೇನು ಹೀಗೆ, ಎಲ್ಲರನ್ನೂ ಮೇಲಿಂದ ಕೆಳಗೆ ಹಾಗೆ ನೋಡುತ್ತಿದ್ದೀಯ' ಎನ್ನುವಂತೆ ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದಾರೆ. ನಾನೇನು ಸುಮ್ಮನೆ ಇದ್ದೆನೇ, ಅವರ ಕಣ್ಣು ಕುಕ್ಕುವಂತೆ ಕಣ್ಣು ಬಿಟ್ಟು ನನ್ನ ಕೆಲಸ ಮುಂದುವರಿಸಿದೆ. ಯಾಕೆಂದರೆ ಅಲ್ಲಿ ನನಗೆ ಮಾತನಾಡಲು ಹೆಚ್ಚು ಪರಿಚಯದವರು ಯಾರೂ ಇರಲಿಲ್ಲ. ತುಂಡು ಜಡೆ, ಬಾಬ್‌ಕಟ್, ತೆಳ್ಳ ಕೂದಲಿನವರು ಎಂಬುದು ಗೊತ್ತಾಗದಂತೆ ಸಣ್ಣ ಮಕ್ಕಳಿಂದ ಹಿಡಿದು ಹಲ್ಲು ಕಟ್ಟಿಸಿಕೊಂಡವರವರೆಗೂ ಅದೆಷ್ಟು ಬಗೆಯ ಹೇರ್ ಸ್ಟೈಲ್‌ಗಳು! ಬಗೆ ಬಗೆಯ ಪ್ಲಾಸ್ಟಿಕ್ ಹೂಗಳಿಂದ ಅಲಂಕೃತ ಉದ್ದನೆಯ ರೆಡಿಮೇಡ್ ಕುಚ್ಚಿನ ಜಡೆಗಳು, ಚಿನ್ನದ ಬಣ್ಣದ ಬಿಲ್ಲೆಗಳನ್ನು ಹೊತ್ತ ತುರುಬುಗಳು, ಉದ್ದಕ್ಕೆ ಇಳಿಬಿಟ್ಟ ಅಲಂಕೃತ ಗುಂಗುರು ಕೇಶವಿನ್ಯಾಸದ ಟೋಪನ್‌ಗಳು ಹೀಗೆ... ಇದೆಲ್ಲದರ ನಡುವೆ ಹದಿಹರಯದ ಹುಡುಗಿಯರು ಯಾವ ರೀತಿಯ ಟಾಪ್‌ಗಳಿಗೆ ಎಂತಹ ಬಾಟಮ್ ತೊಟ್ಟಿದ್ದಾರೆ ಎಂಬುದರ ಕಡೆಗೇ ನನ್ನ ನೋಟ.

ಮಹಿಳೆಯರ ಬಾಟಮ್ ತೊಡುಗೆ ಕಳೆದ ಕೆಲವು ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗೊಡ್ಡಿದೆ. ಸಲ್ವಾರ್ ಕಮೀಜ್‌ನಿಂದ ಪಲಾಜೊ, ಚೂಡಿದಾರಿಗೆ ಟೈಟ್ ಪ್ಯಾಂಟ್, ಪಟಿಯಾಲ, ಲೆಗ್ಗಿನ್, ಜೆಗ್ಗಿನ್, ಪುಶ್‌ಬ್ಯಾಕ್, ಟ್ಯುಲಿಪ್, ಪಠಾನಿ, ಸಿಗರೇಟ್ ಪ್ಯಾಂಟ್ಸ್... ಹೀಗೆ ಹಲವಾರು ಬಾಯಿ ತಿರುಗದ ಹೆಸರುಗಳು.

ಆ ಸಮಾರಂಭದಲ್ಲಿ ನನ್ನ ಕುತೂಹಲ ತಣಿಸುವ ಉಡುಗೆ ಕಾಣದೆ, ಮಾತನಾಡಿಸುವಷ್ಟು ಆಪ್ತರಿಲ್ಲದಿದ್ದರೂ ನೋಡಿ ನಗುವಷ್ಟು ಪರಿಚಯವಿರುವವರನ್ನು ನೋಡಿ ಸ್ಮೈಲ್ ಮಾಡುತ್ತ ಕುಳಿತಿದ್ದೆ. 'ಎಲ್ಲ ಊಟಕ್ಕೆ ಬನ್ನಿ' ಎಂದು ಕರೆದಾಗ, ಲಗುಬಗೆಯಿಂದ ಎದ್ದು ತೆಗೆದುಕೊಂಡು